# ಶ್ರೀಮಾತೆಯವರೊಡನೆ ಮಾತುಕತೆ



## ಸರಯೂ ಬಾಲಾ ದೇವಿ ಅವರ ನೆನಪುಗಳು

**ದಿನಾಂಕ: ೧೪-೫-೧೯೧೧**

ಇಂದು ಸಂಕ್ರಾಂತಿ. ಮಾತೆಯ ಬಳಿ ಹೋಗಿ ಪ್ರಣಾಮ ಮಾಡುತ್ತಿದ್ದಂತೆ "ಬಂದೆಯಾ ಅಮ್ಮಾ, ನಾನು ಯೋಚಿಸುತ್ತಿದ್ದೆ ಏನಾಯಿತೋ ಏನೋ, ಇಷ್ಟು ದಿನ ಬರಲಿಲ್ಲ" ಎಂದು.

**ನಾನು:** "ನಾನು ಇಲ್ಲಿರಲಿಲ್ಲ, ಅಮ್ಮಾ. ತವರುಮನೆಗೆ ಹೋಗಿದ್ದೆ"

**ಶ್ರೀಮಾತೆ:** "ನಿನ್ನ ತಂಗಿ ಸುಮತಿಯೂ ಬರಲಿಲ್ಲ. ಓದು ಬರಹದ ಒತ್ತಡ ಇರಬೇಕು."

**ನಾನು:** "ಮೈದುನ (ತಂಗಿಯ ಗಂಡ) ಇಲ್ಲಿರಲಿಲ್ಲ."

**ಶ್ರೀಮಾತೆ:** "ಆದರೇನಂತೆ, ಸ್ಕೂಲಿಗೆ ಹೋಗುತ್ತಾಳೆ, ಇರಲಿ, ಅವರು ಸಂಸಾರಧರ್ಮ ಪಾಲಿಸುತ್ತಿದ್ದಾರೆ ತಾನೆ?"

**ನಾನು:** "ಯಾವುದು ಸಂಸಾರ? ಯಾವುದು ಧರ್ಮ? ನನಗಂತೂ ಗೊತ್ತಿಲ್ಲ, ನಿಮಗೇ ಗೊತ್ತು" ಇದಕ್ಕೆ ಶ್ರೀಮಾತೆ ಮುಗುಳ್ನಕ್ಕರು.

**ಶ್ರೀಮಾತೆ:** "ಓಹ್ ಎಷ್ಟು ಸೆಖೆ!" ಎನ್ನುತ್ತಾ ಬೀಸಣಿಗೆ ನನ್ನ ಕೈಗಿತ್ತು – "ಆಹಾ! ಊಟ ಮಾಡಿ ತಕ್ಷಣ ಇಲ್ಲಿಗೆ ಓಡಿ ಬಂದಿದ್ದೀಯಾ. ಈಗ ನನ್ನ ಜೊತೆ ಸ್ವಲ್ಪ ಮಲಗಿಕೋ."

ಕೆಳಗಡೆ ಚಾಪೆ ಹಾಸಿತ್ತು. ಅವರ ಜೊತೆ ಮಲಗಲು ಸಂಕೋಚಪಡುತ್ತಿರುವುದನ್ನು ಕಂಡು "ಅದರಲ್ಲೇನಿದೆಯಮ್ಮಾ, ಬಾ ಮಲಗಿಕೋ, ನಾನು ಹೇಳ್ತಾ ಇದ್ದೀನಿ, ಕೇಳು." ಎಂದರು ಶ್ರೀಮಾತೆ. ಬೇರೆ ಉಪಾಯವಿಲ್ಲದ ಅವರ ಪಕ್ಕದಲ್ಲೇ ಮಲಗಿಕೊಂಡೆ.

ಶ್ರೀಮಾತೆಗೆ ಸ್ವಲ್ಪ ನಿದ್ರೆ ಹತ್ತಿತು. ನಾನಂತೂ ನಿಶ್ಶಬ್ದವಾಗಿ ಮಲಗಿದ್ದೇನೆ. ಅಷ್ಟರಲ್ಲಿ ಕೆಲವು ಭಕ್ತೆಯರು, ಇಬ್ಬರು ಸಂನ್ಯಾಸಿನಿಯರು ಬಂದರು. ಕಣ್ಣು ಮುಚ್ಚಿಕೊಂಡೇ ಶ್ರೀಮಾತೆಯವರು "ಯಾರು, ಗೌರ್ ದಾಸೀನಾ?" ಎಂದು ಕೇಳಿದರು.

**ಯುವ ಸಂನ್ಯಾಸಿನಿ:** "ನಿಮಗೆ ಹೇಗೆ ತಿಳಿಯಿತು ಅಮ್ಮಾ?"

**ಶ್ರೀಮಾತೆ:** 'ನನಗೆ ಹಾಗೆನಿಸಿತು.'

ಸ್ವಲ್ಪ ಸಮಯದ ನಂತರ ಶ್ರೀಮಾತೆಯವರು ಎದ್ದು ಕುಳಿತರು.

**ಯುವ ಸಂನ್ಯಾಸಿನಿ:** "ಬೇಲೂರು ಮಠದಿಂದ ಬರುತ್ತಿದ್ದೇವೆ. ಅಲ್ಲಿ ಪ್ರೇಮಾನಂದ ಸ್ವಾಮೀಜಿ ಚೆನ್ನಾಗಿ ಊಟ ಮಾಡಿಸಿ ಕಳುಹಿಸಿದ್ದಾರೆ. ಅವರು ಅಲ್ಲಿರುವಾಗ ಮಠದಿಂದ ಊಟ ಮಾಡದೆ ಬರುವಂತಿಲ್ಲ."

ಆಕೆಯ ಹಣೆಯಲ್ಲಿ ಕುಂಕುಮ ಇಲ್ಲದಿರುವುದನ್ನು ಕಂಡು ಶ್ರೀಮಾತೆಯವರು ಸ್ವಲ್ಪ ಬೈದರು. ಶ್ರೀಮಾತೆಯವರಿಂದ ನನ್ನ ಪರಿಚಯ ಪಡೆದ ಗೌರಿಮಾ ಒಮ್ಮೆ ಅವರ ಆಶ್ರಮಕ್ಕೆ ಬರುವಂತೆ ನನ್ನನ್ನು ಆಮಂತ್ರಿಸಿದರು. "ಅಲ್ಲಿ ಸುಮಾರು ೫೦-೬೦ ಹುಡುಗಿಯರು ಓದುತ್ತಿದ್ದಾರೆ. ಅದಿರಲಿ, ನಿನಗೆ ಹೊಲಿಗೆ ಕೆಲಸ ಬರುತ್ತದೆಯೇ?" ಎಂದು ಕೇಳಿದರು. ನಾನು "ಸ್ವಲ್ಪ ಮಟ್ಟಿಗೆ ಗೊತ್ತು" ಎಂದೆ. "ನಮ್ಮ ಆಶ್ರಮದ ಹುಡುಗಿಯರಿಗೆ ಅದನ್ನು ಸ್ವಲ್ಪ ಹೇಳಿಕೊಡು" ಎಂದರು.

ಶ್ರೀಮಾತೆಯವರ ಆದೇಶದಂತೆ ಒಮ್ಮೆ ಗೌರಿಮಾ ಅವರ ಆಶ್ರಮಕ್ಕೆ ಹೋಗಿದ್ದೆ. ಅಲ್ಲಿ ಅವರು ತುಂಬಾ ಪ್ರೀತಿ ವಿಶ್ವಾಸ ತೋರಿಸಿದರು. ದಿನವೂ ೧-೨ ಗಂಟೆ ಬಂದು ಮಕ್ಕಳಿಗೆ ಹೊಲಿಗೆ ಹೇಳಿಕೊಡುವಂತೆ ಕೇಳಿದರು. ನಾನೆಂದೆ– "ಅಲ್ಪ ವಿದ್ಯಾ ಮಹಾಗರ್ವಿ ಎಂಬಂತೆ ನನಗೆ ತಿಳಿದಿರುವುದೇ ಸ್ವಲ್ಪ, ಆಗಲೇ ಶಿಕ್ಷಕಿ ಆಗುವುದೇ? ಹೆಚ್ಚೆಂದರೆ ಅವರಿಗೆ ವರ್ಣಮಾಲೆ ಇತ್ಯಾದಿಗಳನ್ನು ಹೇಳಿಕೊಡಬಲ್ಲೆ." ಎಂದು. ಆದರೆ ಗೌರಿಮಾ ಪಟ್ಟು ಹಿಡಿದು ಕುಳಿತರು. ಕೊನೆಗೆ ವಿಧಿಯಿಲ್ಲದೆ ಒಪ್ಪಿ ಹೋಗಬೇಕಾಯಿತು.

ಇನ್ನೊಮ್ಮೆ ಶಾಲೆಗೆ ರಜೆ ಇದ್ದುದರಿಂದ ಗೌರಿಮಾ ಅವರ ಆಶ್ರಮಕ್ಕೆ ಹೋಗಿ ಅಲ್ಲಿಂದ ಶ್ರೀಮಾತೆಯವರ ದರ್ಶನಕ್ಕೆ ಹೋದೆ. ಬೇಸಿಗೆ ಕಾಲ. ಅಂದು ನನಗೆ ಸ್ವಲ್ಪ ನಿತ್ರಾಣವಾಗಿತ್ತು. ಶ್ರೀಮಾತೆಯವರು ತಮ್ಮ ಕೊಠಡಿಯಲ್ಲಿ ಅನೇಕ ಮಂದಿ ಭಕ್ತೆಯರ ಮಧ್ಯೆ ಕುಳಿತಿದ್ದಾರೆ. ನಾನು ಪ್ರಣಾಮ ಮಾಡಿದೆ. ನನ್ನನ್ನು ನೋಡಿದ ತಕ್ಷಣ ಸೊಳ್ಳೆಪರದೆಯ ಮೇಲಿಂದ ಬೀಸಣಿಗೆ ತೆಗೆದು ನನಗೆ ಬೀಸಲು ಶುರು ಮಾಡಿದರು. ಅಷ್ಟು ಜನರ ಮಧ್ಯೆ ಅವರ, ಈ ರೀತಿಯ ಸ್ನೇಹ, ಪ್ರೀತಿ, ಕಾಳಜಿಯನ್ನು ನೋಡಿ ಮೂಕವಿಸ್ಮಿತಳಾದೆ! ಎಲ್ಲರೂ ನನ್ನನ್ನೇ ನೋಡುತ್ತಿದ್ದಾರೆ. ನಾನಂತೂ ನಾಚಿಕೆಯಿಂದ ಮುದುಡಿ ಮುದ್ದೆಯಾದೆ. ಆದರೆ ಶ್ರೀಮಾತೆಯವರು ಕೇಳಬೇಕೇ? ಒಂದೇ ಸಮನೆ ಅವರು ಗಾಳಿ ಬೀಸಲಾರಂಭಿಸಿದರು. ನಾನು ಎಷ್ಟು ಹೇಳಿದೆ, "ಬೀಸಣಿಗೆ ನನಗೆ ಕೊಡಿ, ನಾನೇ ಬೀಸಿಕೊಳ್ಳುತ್ತೇನೆ"ಎಂದು. ಶ್ರೀಮಾತೆ ಪ್ರೀತಿಯಿಂದ– 'ಆಗಲಿ, ಆಗಲಿ, ಸ್ವಲ್ಪ ವಿಶ್ರಾಂತಿ ಪಡೆ. ಆಮೇಲೆ ನೋಡೋಣ' ಎಂದರು. ನಂತರ ಪ್ರಸಾದದ ಸಿಹಿ ತಿಂಡಿ ಮತ್ತು ನೀರನ್ನು ತಂದರು. ನಾನದನ್ನು ತಿಂದ ಮೇಲೆಯೇ ಅವರಿಗೆ ತೃಪ್ತಿ! ಶಾಲೆಯ ಗಾಡಿ ಕಾಯುತ್ತಿದ್ದುದರಿಂದ ಕೆಲವೇ ಮಾತುಗಳನ್ನಾಡಿ ಹಿಂತಿರುಗಿದೆ.

*(ಮುಂದುವರಿಯುವುದು)*